ಕರ್ನಾಟಕ ಸರ್ಕಾರ

ಸಮಾಜ ಕಲ್ಯಾಣ ಇಲಾಖೆ

ಸಂಖ್ಯೆ:ಸಕಇ/ಪಪೂತಕೇ/ಎಸ್-4/ಸಿಆರ್-20/2019-20

ಮುಖ್ಯ ಆಡಳಿತಾಧಿಕಾರಿಗಳು
ಪರೀಕ್ಷಾ ಪೂರ್ವ ತರಬೇತಿ ಕೇಂದ್ರ,
ಡಾ.ಬಿ.ಆರ್.ಅಂಬೇಡ್ಕರ್ ಭವನ,
ಬೆಂಗಳೂರು, ದಿನಾಂಕ: 18.01.2020.

**"ಅಧಿಸೂಚನೆ"**

ವಿಷಯ : 2019-20ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಅಭ್ಯರ್ಥಿಗಳನ್ನು ವಿವಿಧ ತರಬೇತಿ ಸಂಸ್ಥೆಗಳಲ್ಲಿ ಗ್ರೂಪ್-ಎ&ಬಿ (ಎನ್‌ಡಿಎ) ಸ್ಪರ್ಧಾತ್ಮಕ ಪರೀಕ್ಷೆಯ ಪೂರ್ವಭಾವಿ ತರಬೇತಿಗಾಗಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು 2ನೇ ಸುತ್ತಿನ ಮೂಲ ದಾಖಲಾತಿ ಪರಿಶೀಲನೆ ಮಾಡುವ ಬಗ್ಗೆ.

2019-20ನೇ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖೆಯ ಪರೀಕ್ಷಾ ಪೂರ್ವ ತರಬೇತಿ ಕೇಂದ್ರ ಬೆಂಗಳೂರು ಮೂಲಕ ರಾಜ್ಯದ ಪರಿಶಿಷ್ಟ ಜಾತಿ/ವರ್ಗದ ಅಭ್ಯರ್ಥಿಗಳನ್ನು ಗ್ರೂಪ್-ಎ&ಬಿ (ಎನ್.ಡಿ.ಎ.) ಪರೀಕ್ಷೆಗಳ ಪೂರ್ವಭಾವಿ ತರಬೇತಿಗೆ ನಿಯೋಜಿಸುವ ಸಂಬಂಧ. ದಿನಾಂಕ: 21.01.2020 ರಂದು ಅರ್ಹ ಅಭ್ಯರ್ಥಿಗಳ 2ನೇ ಸುತ್ತಿನ ಮೂಲ ದಾಖಲಾತಿ ಪರಿಶೀಲನೆಗೆ ಆಹ್ವಾನಿಸಲಾಗಿದೆ. ಅಭ್ಯರ್ಥಿಗಳ ಪಟ್ಟಿಯನ್ನು ಇಲಾಖೆಯ ವೆಬ್‌ಸೈಟ್ **www.sw.kar.nic.in** ನಲ್ಲಿ ಅಳವಡಿಸಲಾಗಿದೆ.

**ವಿಶೇಷ ಸೂಚನೆ:-**

ಮೂಲದಾಖಲಾತಿಯ ಪ್ರಕ್ರಿಯೆಯಲ್ಲಿ ಎನ್‌ಡಿಎ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿಯನ್ನು ನೀಡಲು ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸಲಾಗಿದೆ.

1) ಮೂಲದಾಖಲಾತಿಯ ಪ್ರಕ್ರಿಯೆ ನಡೆಸುವ ದಿನಾಂಕ ಮತ್ತು ಸಮಯ:-

| ಸ್ಪರ್ಧಾತ್ಮಕ ಪರೀಕ್ಷೆಯ ವಿವರ | ವರ್ಗ | ಮೂಲದಾಖಲಾತಿಗೆ ಕರೆಯಲಾದ ಅಭ್ಯರ್ಥಿಗಳ ಸಂಖ್ಯೆ | ದಿನಾಂಕ | ಸಮಯ |
|---|---|---|---|---|
| ಎನ್.ಡಿ.ಎ | ಪರಿಶಿಷ್ಟ ಜಾತಿ | 140 | 21.01.2020 | ಮಧ್ಯಾಹ್ನ 3.00 ಗಂಟೆಗೆ |
| | ಪರಿಶಷ್ಟ ವರ್ಗ | 38 | | |
| | ಒಟ್ಟು | 178 | | |

**2) ಪರಿಶೀಲನೆ ವೇಳೆಯಲ್ಲಿ ಹಾಜರುಪಡಿಸಬೇಕಾದ ದಾಖಲೆಗಳ ವಿವರ:**

- 10ನೇ ತರಗತಿ ಅಂಕಪಟ್ಟಿ, ಡಿಗ್ರಿ ಪ್ರಮಾಣ ಪತ್ರ, ಆಧಾರ್ ಕಾರ್ಡ್, ಜಾತಿ ಪ್ರಮಾಣ ಪತ್ರ, ಇತ್ತೀಚಿನ ಆದಾಯ ಪ್ರಮಾಣ ಪತ್ರದ ಮೂಲದಾಖಲಾತಿ ಹಾಗೂ ಈ ದಾಖಲೆಗಳ ದೃಢೀಕೃತ ಜೆರಾಕ್ಸ್ ಪ್ರತಿ ಹಾಗೂ 3 ಭಾವಚಿತ್ರ ನೀಡುವುದು.

6) **ಮೂಲ ದಾಖಲಾತಿ ಪರಿಶೀಲಿಸುವ ಸ್ಥಳ:-**

**ಪರೀಕ್ಷಾ ಪೂರ್ವ ತರಬೇತಿ ಕೇಂದ್ರ**

**ಡಾ:ಬಿ.ಆರ್. ಅಂಬೇಡ್ಕರ್ ಭವನ,**
**ಮಿಲ್ಲರ್ಸ್ ರಸ್ತೆ, ವಸಂತ ನಗರ,**
**ಬೆಂಗಳೂರು-560 052**
**ದೂರವಾಣಿ ಸಂಖ್ಯೆ:080-22207784**

ಸಹಿ/-
ಮುಖ್ಯ ಆಡಳಿತಾಧಿಕಾರಿಗಳು,
ಪರೀಕ್ಷಾ ಪೂರ್ವ ತರಬೇತಿ ಕೇಂದ್ರ,
ಬೆಂಗಳೂರು.

**ಪ್ರತಿಯನ್ನು ಮಾಹಿತಿ ಮತ್ತು ಮುಂದಿನ ಕ್ರಮಕ್ಕಾಗಿ:-**

1)ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ರವರಿಗೆ ಗೌರವ ಪೂರ್ವಕವಾಗಿ ಸಲ್ಲಿಸಲಾಗಿದೆ.

2)ಮಾನ್ಯ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು,ರವರಿಗೆ ಗೌರವಪೂರ್ವಕವಾಗಿ ಸಲ್ಲಿಸ ಲಾಗಿದೆ.

3)ಮಾನ್ಯ ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು, ರವರಿಗೆ ಗೌರವ ಪೂರ್ವಕವಾಗಿ ಸಲ್ಲಿಸುತ್ತಾ, ದಯವಿಟ್ಟು ಈ ಮೇಲಿನ ದಿನಾಂಕದಂದು ಕೌನ್ಸಿಲಿಂಗ್ ಪ್ರಕ್ರಿಯೆಗೆ 04 ಸಿಬ್ಬಂದಿಗಳನ್ನು ನಿಯೋಜಿಸಿ, ಸಹಕರಿಸಬೇಕೆಂದು ಕೋರಲಾಗಿದೆ.

4)ಸದಸ್ಯ ಕಾರ್ಯದರ್ಶಿಗಳು, ಡಾ:ಬಿ.ಆರ್.ಅಂಬೇಡ್ಕರ್ ಮೆಮೋರಿಯಲ್ ಟ್ರಸ್ಟ್, ಬೆಂಗಳೂರು, ರವರಿಗೆ ಗೌರವಪೂರ್ವಕವಾಗಿ ಸಲ್ಲಿಸುತ್ತಾ, ದಯವಿಟ್ಟು ದಿನಾಂಕ:21-01-2020ರಂದು ಡಾ:ಬಿ.ಆರ್. ಅಂಬೇಡ್ಕರ್ ಭವನದ ಊಟದ ಕೋಣೆಯನ್ನು ಕೌನ್ಸಿಲಿಂಗ್ ಪ್ರಕ್ರಿಯೆಗೆ ಉಪಯೋಗಿಸಿಕೊಳ್ಳಲು ಅನುಮತಿಯನ್ನು ನೀಡಬೇಕೆಂದು ಕೋರಲಾಗಿದೆ.